


# ಗೊದ್ದ ರೂಪದ ಪ್ರಾರ್ಥನಾ ಕೀಟ

**ಆಕೃತಿಯಲ್ಲಿ ಗೊದ್ದದ ದೊಡ್ಡಣ್ಣನಂತೆ ಕಾಣುವ ಈ ಕೀಟದ ತಂತ್ರಗಾರಿಕೆ ಅಚ್ಚರಿ ಹುಟ್ಟಿಸುವಂಥದ್ದು.**

■ **ಶಶಿಧರಸ್ವಾಮಿ ಆರ್. ಹಿರೇಮಠ**

ಮುಂಜಾನೆ ಹಿತ್ತಲಿನಲ್ಲಿ ಗಿಡಗಳಿಗೆ ನೀರು ಹಾಕುತ್ತಿದ್ದಾಗ ಗಿಡವೊಂದರ ಎಲೆ ಮೇಲೆ ಗೊದ್ದದಂತೆ (ಕಪ್ಪು ಇರುವೆ) ಕಾಣುತ್ತಿದ್ದ ಕೀಟವೊಂದು ಕಣ್ಣಿಗೆ ಬಿತ್ತು. ಆ ಕೀಟದ ಕಾಲುಗಳು ಮಾತ್ರ ಹಸಿರಾಗಿದ್ದವು. ತನ್ನ ಎರಡೂ ಮುಂಗಾಲುಗಳನ್ನು ಮೇಲಕ್ಕೆತ್ತಿ ನಮಸ್ಕಾರ ಹೇಳುವಂತೆ ನಿಂತಿತ್ತು.

ದೇಹವನ್ನೊಮ್ಮೆ ಹಿಂದೆ ಮುಂದೆ ಚಲಿಸಿದಂತೆ ಮಾಡಿ, ಇನ್ನೊಂದು ಗಿಡದ ಕಾಂಡದತ್ತ ಸಾಗಿತು. ಅಲ್ಲಿ 'ಕೊಂಬಿನ ಜಿಗಿಹುಳ' ತನ್ನ ಕೊಳವೆಯಾಕಾರದ ಬಾಯಿಯಿಂದ ಸಸ್ಯದ ರಸವನ್ನು ಹೀರುವುದರಲ್ಲಿ ಮಗ್ನವಾಗಿತ್ತು.

ಜಿಗಿಹುಳ ಜೇನುತುಪ್ಪದಂತಿರುವ ಅಂಟನ್ನು ಸ್ರವಿಸುವ ಮೂಲಕ ಗೊದ್ದವನ್ನು ಆಕರ್ಷಿಸುತ್ತದೆ. ಈ ಕೀಟ ಆ ಕಡೆ ಚಲಿಸುತ್ತಿದ್ದಂತೆ, ಸಿಹಿಯನ್ನರಸಿ ಗೊದ್ದ ತನ್ನತ್ತ ಬಂದೀತೆಂದು ಯಾಮಾರಿದ ಜಿಗಿಹುಳ ಬೇಟೆಗೆ ಅಣಿಯಾಗಿತ್ತು. ಅಷ್ಟರಲ್ಲಿ ಗೊದ್ದ ರೂಪದ ಈ ಕೀಟ ಮುಂಗಾಲುಗಳನ್ನು ಚಾಚಿ ಅರೆಕ್ಷಣದಲ್ಲಿ ಅದನ್ನು ಹಿಡಿದು ಹತ್ತಿರದ ಎಲೆಯೊಂದರ ಮೇಲೆ ಕುಳಿತು ಭಕ್ಷಿಸಲು ಆರಂಭಿಸಿತು.

ಅನಂತರ ಎಲೆಯಿಂದ ಎಲೆಗೆ ಸಾಗುತ್ತಾ ಬೇಟೆಯನ್ನು ತಿನ್ನತೊಡಗಿತು. ಬೇಟೆಯ ಕಾಲು, ತಲೆ, ಉದರ, ಮುಖ, ಕೊಂಬು, ರೆಕ್ಕೆಗಳನ್ನು ಒಂದೊಂದಾಗಿ ತಿನ್ನುತ್ತಲಿತ್ತು. ಕಾಲು ಗಂಟೆಯಲ್ಲಿ ಜಿಗಿಹುಳವನ್ನು ತಿಂದು ತೇಗಿತು. ಉಪಾಹಾರ ಮುಗಿಸಿ ಕೆಳಗಿಳಿದು ಇನ್ನೊಂದು ಎಲೆಯಲ್ಲಿ ವಿಶ್ರಾಂತಿಗೆ ಕುಳಿತುಕೊಂಡಿತು.

ಗೊದ್ದವನ್ನು ಹೋಲುವ ಈ ಕೀಟವನ್ನು 'ಗೊದ್ದ ರೂಪದ ಪ್ರಾರ್ಥನಾ ಕೀಟ' ಎಂದು ಹೇಳಬಹುದು. 'ಇರುವೆ ಅನುಕರಣಾ ಕೀಟ' ಅಥವಾ 'ಕಪ್ಪಿರುವೆ ರೂಪದ ಪ್ರಾರ್ಥನಾ ಕೀಟ'ಗಳೆಂದು ಕರೆಯಲಾಗುತ್ತದೆ. ಇಂಗ್ಲಿಷ್‌ನಲ್ಲಿ 'ಆಂಟ್ ಮಿಮಿಕ್ ಮ್ಯಾಂಟಿಸ್' ಅಥವಾ 'ಏಷಿಯನ್ ಆಂಟ್ ಮ್ಯಾಂಟಿಸ್' ಎಂಬ ಹೆಸರಿದೆ. ವೈಜ್ಞಾನಿಕವಾಗಿ ಓಡಾಂಟೊಮ್ಯಾಂಟಿಸ್ ಪ್ಲಾನಿಸೆಪ್ಸ್ (Odontomantis planiceps) ಎಂದು ಹೆಸರಿಸಿ, ಸಂಧಿಪದಿಗಳ, ಕೀಟ ವರ್ಗದ, ಮ್ಯಾಂಟೋಡಿಯಾ ಗಣದ ಹೈಮೆನೊಪೊಡಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

ಗಾತ್ರದಲ್ಲಿ ಗೊದ್ದಕ್ಕಿಂತ ತುಸು ದೊಡ್ಡದಾಗಿದ್ದು, ಗಂಡು ಕೀಟ 1.4 ಸೆಂ.ಮೀ. ಹಾಗೂ ಹೆಣ್ಣು ಕೀಟ 2 ಸೆಂ.ಮೀ.ನಷ್ಟು ಬೆಳೆಯುತ್ತದೆ. ತಲೆ ಭಾಗದಲ್ಲಿ ದುರ್ಬೀನಿನಂತೆ ಕಾರ್ಯನಿರ್ವಹಿಸುವ ಸಂಯುಕ್ತ ಕಣ್ಣುಗಳು, ಬಾಯಿ, ತೆಳುವಾಗಿರುವ ಮೀಸೆಗಳಿವೆ. ತಲೆಯನ್ನು 180 ಕೋನದಲ್ಲಿ ಹೊರಳಾಡಿಸಿ ನೋಡಬಲ್ಲದು. ಮುಂಗಾಲುಗಳ ಅಂಚಿನಲ್ಲಿ ಮೊನಚಾದ ಮುಳ್ಳುಗಳಿದ್ದು ಇವು ಬೇಟೆ ಹಿಡಿಯಲು ಸಹಾಯಕ. ತನ್ನ ಬೆಳವಣಿಗೆಯ ಹಂತಗಳಲ್ಲಿ ಬೇಟೆಸಿಯನ್ ಮಿಮಿಕ್ರಿ (ಇದೊಂದು ಬದುಕುಳಿಯುವ ತಂತ್ರವಾಗಿದ್ದು, ತನ್ನನ್ನು ಪರಭಕ್ಷಕಗಳಿಂದ ರಕ್ಷಿಸಿಕೊಳ್ಳಲು ಅಪಾಯಕಾರಿ ಜಾತಿಯ ಕೀಟವನ್ನು ಅನುಕರಿಸುವುದು) ಪ್ರದರ್ಶಿಸುತ್ತದೆ. ವಿಶೇಷವಾಗಿ 1ರಿಂದ 3ನೇ ಹಂತದ ರೂಪಾಂತರ ಪ್ರಕ್ರಿಯೆವರೆಗೆ ಅತ್ಯಂತ ದುರ್ಬಲ ಶರೀರ ಹೊಂದಿ, ಗೊದ್ದವನ್ನು ಅನುಕರಿಸುವ ತಂತ್ರಗಾರಿಕೆ ಬಳಸಿಕೊಳ್ಳುತ್ತದೆ.

ಇದು ಪೂರ್ಣ ಕಪ್ಪು ಬಣ್ಣದ್ದಾಗಿದ್ದು, ಪ್ರತಿ ಎದೆಗೂಡಿನ ವಿಭಾಗದ ಅಂಚುಗಳಲ್ಲಿ ಹಸಿರು ಪಟ್ಟಿ ಹೊಂದಿರುತ್ತದೆ. 4ನೇ ಹಂತದಲ್ಲಿ ಹೆಚ್ಚು ಹಸಿರು ಬಣ್ಣದ್ದಾಗಿ ತಾನು ವಾಸಿಸುವ ಸಸ್ಯವರ್ಗವನ್ನು ಅವಲಂಬಿಸಿ ಬಣ್ಣದಲ್ಲಿ ಕೆಲವು ವ್ಯತ್ಯಾಸಗಳನ್ನು ಮೈಗೂಡಿಸಿಕೊಂಡು ಬೇಟೆಯಾಡುವ ಪ್ರವೃತ್ತಿ ಬೆಳೆಸಿಕೊಳ್ಳುತ್ತದೆ.



ತಾನು ವಾಸಿಸುವ ವ್ಯಾಪ್ತಿಯಲ್ಲಿರುವ ಸಸ್ಯಾವರಣಕ್ಕೆ ಸುಲಭವಾಗಿ ಒಗ್ಗಿಕೊಳ್ಳುವ ಗುಣ ವಿಶೇಷಣದಿಂದ ನಗರದ ಉದ್ಯಾನಗಳಲ್ಲಿ ಮತ್ತು ಆಲಂಕಾರಿಕ ಸಸ್ಯಗಳಲ್ಲಿ, ಕೃಷಿ ಪ್ರದೇಶ, ತೋಟಗಳು, ಕುರುಚಲು ಕಾಡುಗಳ ಪೊದೆ ಸಸ್ಯಗಳಂಥ ತಾಣಗಳಲ್ಲಿ ವಾಸಿಸುತ್ತದೆ. ಎಲೆಗಳ ಮೇಲೆ ತನ್ನ ಎರಡೂ ಮುಂಗಾಲುಗಳನ್ನು ಮೇಲಕ್ಕೆತ್ತಿ ದೇವರಲ್ಲಿ ಬೇಡಿಕೊಳ್ಳುವ ಭಂಗಿಯಲ್ಲಿ ನಿಂತು ಬೇಟೆ ಹಾದು ಹೋಗುವುದನ್ನೇ ಕಾಯುತ್ತಾ ನೊಣಗಳು, ಪತಂಗಗಳು, ಮಿಡತೆ, ಸಣ್ಣ ಜೀರುಂಡೆಗಳು ಇತರ ಸಣ್ಣ ಮತ್ತು ಮಧ್ಯಮ ಗಾತ್ರದ ಕೀಟಗಳು ಅದರತ್ತ ಸುಳಿದಾಗ ಮುಂಗಾಲುಗಳನ್ನು ಚಾಚಿ ಭಕ್ಷಿಸುತ್ತದೆ. ತನ್ನ ಶತ್ರು ಪ್ರಾಣಿ–ಪಕ್ಷಿಗಳು ಕಂಡುಬಂದರೆ ಬಹು ಬೇಗನೆ ಎಲೆಯ ಕೆಳಭಾಗಕ್ಕೆ ಹಿಮ್ಮೆಟ್ಟಿ ಕುಳಿತು ರಕ್ಷಣೆ ಪಡೆದುಕೊಳ್ಳುತ್ತದೆ.

ಪ್ರತಿಕ್ರಿಯಿಸಿ: feedback@sudha.co.in